

ಮಹಾಂತೇಶ ನವಲಕಲ್

ಕಲೆ: ಎಸ್.ವಿ. ಹೂಗಾರ್

# ಹಾಲಿನ ನದಿಗೆ ಮೈಯೆಲ್ಲ ಕಾಲು



ಅವಳಿಗೆ ಇಂದು ಮೈಯಲ್ಲಿ ನೋವು ಕಾಣಿಸಿಕೊಂಡು, ನಡೆಯಲಾರದ ಒಂದು ಮಾನಸಿಕ ಅಸ್ಥಿರತೆ ಕಾಡುತ್ತಿತ್ತು. ಊಟ ಉಪಚಾರಗಳು ವರ್ಜ್ಯವಾಗಿದ್ದವು. ಇಂದಿನ ಪ್ರಮುಖ ಆಹಾರ ಆ್ಯಪಲ್ ಆಗಿತ್ತು. ಆ್ಯಪಲ್ ಬಿಟ್ಟು ಬೇರೇನೂ ಕೇಳದ ದೇಹ ಎಲ್ಲಕ್ಕಿಂತಲೂ ಹೆಚ್ಚಾಗಿ ಏಕಾಂತವನ್ನು ಬಯಸಿತ್ತು. ಏಕಾಂತ ಬಿಟ್ಟು ಬೇರೆ ಯಾವುದಕ್ಕೂ ಮನಸ್ಸಿನ ಕಾಯಿಲೆ ಬಗ್ಗುವಂತಹದಲ್ಲ. ದಪ್ಪನೆಯ ರಗ್ಗು ಹೊದ್ದುಕೊಂಡು ಮಲಗಿದಳು. ಆದರೆ ಆ ಹುಡುಗ ಅವಳಿಗೆ ಆರಾಮವಿಲ್ಲದ ಸಂಗತಿ ಬಗ್ಗೆ ಗೊತ್ತಿದ್ದರೂ, ಇನ್ನೂ ಇತ್ತ ಸುಳಿಯದಿದ್ದದ್ದು ಆಕೆಗೆ ಗಾಬರಿಯಾದರೂ, ಆದದ್ದೆಲ್ಲ ಒಳ್ಳೆಯದೇ ಎಂದುಕೊಂಡು ರಗ್ಗಿನೊಳಗೆ ಇರುವ ಬೆಚ್ಚಗೆ ಮತ್ತು ಕತ್ತಲಿನೊಳಗೆ ಒಂದಾಗಲು ಪ್ರಯತ್ನಿಸಿದಳು, ಆದರೂ ನಿದ್ರೆ ಎಂಬುದು ಕೃತಕ ಚೌಕಟ್ಟಿನೊಳಗೆ ನಾನಿಲ್ಲ ಎಂದು ಬಹುದೂರ ಮರೀಚಿಕೆಯಂತೆ ಇತ್ತು. ಡಾಕ್ಟರ್ ಬರೆದುಕೊಟ್ಟ ಅರ್ಧ ಮಾತ್ರೆಗಳು ಮಾತ್ರ ಖರೀದಿಸಿಕೊಂಡು ಬಂದು ಟೀಪಾಯಿ ಮೇಲಿಟ್ಟು ಅವರು ಹೇಳಿದ ಮಾತ್ರೆಗಳನ್ನು ತೆಗೆದುಕೊಂಡು ಮಲಗಿದರೂ ನಿದ್ರೆ ಹತ್ತಿರ ಸುಳಿದಿರಲಿಲ್ಲ. ಒಮ್ಮಿಂದೊಮ್ಮಲೆ ಎದೆಗೆ ಯಾರೋ ಜೋರಾಗಿ ಒದ್ದಂತಾಯಿತು.

ಲೈಟು ಹಾಕಿದಳು, ಒಂದು ಕ್ಷಣ ಕಣ್ಮುಚ್ಚಿ ಹಾಗೆ ದಿಂಬಾನಿಸಿಕೊಂಡು ಕುಳಿತಳು, ಹೊರಗೆ ಸೂಸುವ ಸುಳಿಗಾಳಿ ಕಿಡಕಿ ಮತ್ತು ಬಾಗಿಲಿಗೆ ಅಪ್ಪಳಿಸಿ ಧಡ್....